ವಿಧಾನ ಸಭಾಕ್ಷೇತ್ರಗಳಲ್ಲಿ ಆರಾಧನ ಸಮಿತಿಗಳ ರಚನೆ

581 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೆ ಪ್ರತ್ಯೇಕವಾಗಿ ಆರಾಧನಾ ಸಮಿತಿಗಳನ್ನು ರಚಿಸಲಾಗಿದೆಯೇ, ಇಲ್ಲದಿದ್ದಲ್ಲಿ ರಚಿಸದಿರಲು ಕಾರಣವೇನು.

ಆ) ಈ ಆರಾಧನಾ ಸಮಿತಿಗಳಿಗೆ ಕಳೆದ ಒಂದು ವರ್ಷದಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು, ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ರಾಜ್ಯದ ಪ್ರತಿಯೊಂದು ವಿಧಾನ ಸಭಾಕ್ಷೇತ್ರಕ್ಕೆ ಪ್ರತ್ಯೇಕವಾಗಿ ಆರಾಧನಾ ಸಮಿತಿಗಳನ್ನು ರಚಿಸಲಾಗುತ್ತದೆ. ಇದುವರೆವಿಗೂ 177 ವಿಧಾನ ಸಭಾ ಕ್ಷೇತ್ರಗಳ ಆರಾಧನಾ ಸಮಿತಿಗಳನ್ನು ರಚಿಸಿರುತ್ತದೆ. ಉಳಿದ ವಿಧಾನ ಸಭಾ ಕ್ಷೇತ್ರಗಳ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) 1994-95ರಲ್ಲಿ 6.71 ಕೋಟಿ ರೂ. ಗಳನ್ನು ಬಿಡುಗಡೆಮಾಡಿದ್ದು ಸಮಿತಿಗಳು ರಚನೆಯಾಗದಿದ್ದರೂ ಹಣ ಖರ್ಚಾಗಿರುವುದಿಲ್ಲ 1995-96ನೇ ವರ್ಷದಲ್ಲಿ 5 ಕೋಟಿ ರೂ.ಗಳನ್ನು ಅಯವ್ಯಯದಲ್ಲಿ ಒದಗಿಸಿದ್ದು ಸದ್ಯದಲ್ಲೇ ಬಿಡುಗಡೆ ಮಾಡಲಾಗುವುದು.

ಜಯನಗರದಲ್ಲಿರುವ ಬಸ್ ನಿಲ್ದಾಣದ ಗಣಕೀಕರಣ ಮುಂಗಡ ಬುಕ್ಕಿಂಗ್ ಕೌಂಟರ್

589 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರ ಬಸ್ ನಿಲ್ದಾಣದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಗಣಕೀಕರಣದ ಮುಂಗಡ ಬುಕ್ಕಿಂಗ್ ಕೌಂಟರನ್ನು ಸ್ಥಾಪಿಸಿದೆಯೇ?

ಆ) ಹಾಗಿದ್ದಲ್ಲಿ ಈ ಕೌಂಟರ್ ಜನವರಿ 1995ರಿಂದ ಡಿಸೆಂಬರರವರೆಗೆ ಎಷ್ಟು ದಿವಸ ತೆರೆದಿದೆ ಹಾಗೂ ಎಷ್ಟು ದಿವಸ ಕೆಲಸ ನಿರ್ವಹಿಸಿದೆ?

ಇ) ಈ ಕೌಂಟರ್ ಯಾವಾಗಲೂ ಮುಚ್ಚಿರುವುದು ಹಾಗೂ ವಿದ್ಯುತ್ ತೊಂದರೆಯಿಂದ ಮುಂಗಡ ಬುಕ್ಕಿಂಗ್ ವ್ಯವಸ್ಥೆ ಸ್ಥಗಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ, ಈ ಕೌಂಟರಸರಿಯಾಗಿ ಕೆಲಸ ನಿರ್ವಹಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೆ?

ಉ) ವಿದ್ಯುತ್ ಅಭಾವ ಇರುವುದರಿಂದ, ಜನರೇಟರನ್ನು ಉಪಯೋಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಹೌದು.

ಆ) ಸಾಫ್ಟ್‌ವೇರ್ ಅಭಿವೃದ್ಧಿಗಾಗಿ ಕೌಂಟರನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದ್ದು 26-7-1995ರಂದು ಪುನಃ ಪ್ರಾರಂಭಿಸಲಾಗಿದೆ. ಸದರಿ ದಿನಾಂಕದಿಂದ ಡಿಸೆಂಬರ್ ತಿಂಗಳ ಕೊನೆಯವರೆಗೆ ಕೆಲಸದ ವೇಳೆಯಲ್ಲಿ ಎಲ್ಲ ದಿನಗಳಲ್ಲೂ ತೆರೆದು ಕೆಲಸ ನಿರ್ವಹಿಸಿದೆ.

ಇ) ಅನ್ವಯಿಸುವುದಿಲ್ಲ.

ಈ) ಯು.ಪಿ.ಎಸ್. ವ್ಯವಸ್ಥೆ ಇರುವುದರಿಂದ ಜನರೇಟರ್ ಅವಶ್ಯಕತೆ ಇರುವುದಿಲ್ಲ.

ರಾಜ್ಯದಲ್ಲಿರುವ ನಿರುದ್ಯೋಗಿಗಳ ಸಂಖ್ಯೆ ಕುರಿತು

594 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು ವಿವಿಧ ವಿದ್ಯಾರ್ಹತೆಗಳ ನಿರುದ್ಯೋಗಿಗಳ ಜಿಲ್ಲಾವಾರು ವಿವರಗಳನ್ನು ನೀಡುವುದು;

ಆ) ಕಳೆದ 5 ವರ್ಷಗಳಿನದ ಉದ್ಯೋಗ ವಿನಿಮಯ ಕೇಂದ್ರಗಳ ಸಹಾಯದಿಂದ ಉದ್ಯೋಗ ಪಡೆದವರ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡುವುದು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ರಾಜ್ಯದಲ್ಲಿರುವ ನಿರುದ್ಯೋಗಿಗಳ ಬಗ್ಗೆ ಖಚಿತ ಮಾಹಿತಿ ಲಭ್ಯವಿರುವುದಿಲ್ಲ. ಆದರೆ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಗಳಲ್ಲಿ 1995ನೇ ಡಿಸೆಂಬರ್ ಅಂತ್ಯಕ್ಕೆ ಒಟ್ಟು 17,42,657 ಅಭ್ಯರ್ಥಿಗಳು ಉದ್ಯೋಗಾಕಾಂಕ್ಷಿಗಳಾಗಿದ್ದರು.

ಅಭ್ಯರ್ಥಿಗಳ ಜಿಲ್ಲಾವಾರು ಶೈಕ್ಷಣಿಕ ವಿಂಗಡಾಧಾರಿತ ಅಂಕಿ ಅಂಶಗಳನ್ನು ಅನುಬಂಧ (1)(ಎ) ಮತ್ತು 1(ಬಿ)ನಲ್ಲಿ ನೀಡಲಾಗಿದೆ.

ಆ) 1991ನೇ ಸಾಲಿನಿಂದ 1995ನೇ ಸಾಲಿನ ಅಂತ್ಯದ ವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ 79,792 ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಿಕೊಡಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 2ರಲ್ಲಿ ನೀಡಲಾಗಿದೆ.